

ವಾತಾವರಣಕ್ಕೆ ದೂಡುವುದು ಸರಿಯಲ್ಲ' ಎಂಬುದು ಅವರ ಖಡಾಖಂಡಿತ ನುಡಿ.

ಮಕ್ಕಳನ್ನು ಶಿಸ್ತಿನಿಂದ ಬೆಳೆಸುವವರನ್ನು ಅವರು ಕೇಳುವ ಪ್ರಶ್ನೆಯೂ ಅಷ್ಟೇ ಹರಿತವಾಗಿದೆ. 'ಒಂದು ಮಟ್ಟದ ಸನ್ನಡತೆಯನ್ನು ಬೆಳೆಸುವುದು ಮಾತ್ರ ತಂದೆತಾಯಿಗಳ ಕರ್ತವ್ಯ. ಸನ್ನಡತೆ ಎಂದರೆ ನಿಮ್ಮ ಗೈರು ಹಾಜರಿಯಲ್ಲಿ ಕೂಡ ಮಕ್ಕಳು ಒಳ್ಳೆಯ ನಡವಳಿಕೆ ತೋರುವಂತಿರಬೇಕು. ಮಕ್ಕಳು ಟೀವಿ, ಮೊಬೈಲ್ ನೋಡಬಾರದು ಎಂದರೆ ಅದಕ್ಕಿಂತ ಉತ್ತಮ ಪರ್ಯಾಯ ಯಾವುದು ಎನ್ನುವುದನ್ನು ನೀವು ತಿಳಿಸಿಕೊಡಬೇಕು. ಅದನ್ನು ಮಾಡದೆ ಟೀವಿ ನೋಡಬೇಡ ಎಂದರೆ ಮಕ್ಕಳು ಕೇಳುತ್ತಾರೆಯೇ?'



ಟೈಂ ಟೇಬಲ್ ಹಾಕಿಕೊಂಡು ಮಕ್ಕಳನ್ನು ಬೆಳೆಸುವುದರ ಕುರಿತೇ ಶ್ರೀಧರಮೂರ್ತಿ ಅವರಿಗೆ ಅಸಮಾಧಾನವಿದೆ.

'ಪುಟ್ಟ ಮನಸುಗಳಿಗೆ ಸಮಯ ನಿರ್ವಹಣೆ ಕಷ್ಟ. ಹೀಗಾಗಿ ತಂದೆ ತಾಯಿಗಳು ಮಕ್ಕಳಿಗೆ ಸಮಯದ ನಿರ್ಬಂಧ ಹಾಕಿಕೊಡುತ್ತಾರೆ. ಗಡಿಯಾರ ನೋಡಿಕೊಂಡು ಮಕ್ಕಳನ್ನು ಬೆಳೆಸುವುದು ಇಂದು ನಡೆಯುತ್ತಿದೆ. ಅದು ಸರಿಯಲ್ಲ. ಆಗ ಅವರ ಕುತ್ತಿಗೆ ಮೇಲೆ ನಿಂತು ನಾವು ಉಸಿರಾಡಿಸಿದ ಹಾಗೆ ಆಗುತ್ತದೆ. ಇದು ಮಾಡು ಅದು ಮಾಡು, ಓದಿಕೊ, ಸಂಗೀತ ತರಗತಿಯಲ್ಲಿ ಕಲಿತದ್ದನ್ನು ಅಭ್ಯಾಸ ಮಾಡಿಕೊ ಹೀಗೆ ಅವರ ಸಮಯವನ್ನು ಒಂದಾದ ಮೇಲೆ ಒಂದರಂತೆ ಪಾಲಕರು ನಿರ್ಬಂಧಿಸುತ್ತಿದ್ದಾರೆ. ಇನ್ನೂ ಅನೇಕರು ಮಕ್ಕಳು ಶಾಲೆಯಿಂದ ಬಂದ ಮೇಲೆ ಹೀಗ್ಹೀಗೆ ಮಾಡಬೇಕು ಎಂದು ಟೈಂ ಟೇಬಲ್ ಹಾಕಿಕೊಟ್ಟುಬಿಡುತ್ತಾರೆ. ಇದು ದೊಡ್ಡ ತಪ್ಪು. ಅವರಿಷ್ಟದ ವಿಷಯಗಳೆಡೆಗೆ ತೆರೆದುಕೊಳ್ಳೋಕೆ ಅವರಿಗೆ ಸ್ಪೇಸ್ ನೀಡಬೇಕು' ಎನ್ನುವ ಅವರು ಒತ್ತಾಯಪೂರ್ವಕವಾಗಿ ಯಾವ್ಯಾವುದೋ ತರಗತಿಗಳಿಗೆ ಕಳಿಸುವುದರ

## ತರಗತಿಗಳಿಗೆ ಸೇರಿಸುವ ಮುನ್ನ...

ಮಕ್ಕಳಿಗೆ ಯಾವುದೋ ವಿಷಯದ ಕುರಿತು ಆಸಕ್ತಿ ಇದೆ ಎಂದು ತಿಳಿದಾಕ್ಷಣ ಆದಕ್ಕೆ ಸಂಬಂಧಿಸಿದ ತರಗತಿಗಳಿಗೆ, ಕೋಚಿಂಗ್‌ಗೆ ಕಳಿಸುವುದು ಸರಿ. ಆದರೆ ಹೀಗೆ ಸೇರಿಸುವಾಗ ಯಾವುದೆಂದರೆ ಆ ತರಗತಿಗಳಿಗೆ ಸೇರಿಸಬೇಡಿ. ಯಾವುದೋ ಒಂದು ತರಬೇತಿ ಕೊಡಿಸುವಾಗ ಆ ತರಬೇತಿ ಕೊಡುವ ಸಂಸ್ಥೆಯ ಹಿನ್ನೆಲೆಯನ್ನೂ ಸ್ವಲ್ಪ ತಿಳಿದುಕೊಳ್ಳಿ. ಇಲ್ಲವಾದರೆ ಹಣ–ಸಮಯ ವ್ಯರ್ಥವಾಗುವುದರ ಜೊತೆಗೆ ಮಗುವಿನ ಸಾಧನೆಯ ಹಾದಿಯೂ ದಿಕ್ಕು ತಪ್ಪುವ ಅಪಾಯಗಳಿರುತ್ತವೆ.

- ತರಗತಿ ನೋಡಲು ಚೆನ್ನಾಗಿದೆ, ಹೆಚ್ಚು ಶುಲ್ಕ ಪಡೆದರೆ ಹೇಳಿಕೊಡುವ ವಿಧಾನವೂ ಚೆನ್ನಾಗಿ ಇರುತ್ತದೆ ಎಂದು ನಂಬಲಾಗದು. ನಿಮ್ಮ ಮಕ್ಕಳನ್ನು ಪಠ್ಯೇತರ ತರಗತಿಗಳಿಗೆ ಸೇರಿಸುವುದಕ್ಕೂ ಮುಂಚೆ ಸಂಸ್ಥೆಯ ಬಗ್ಗೆ ಸಾಕಷ್ಟು ತಿಳಿದುಕೊಳ್ಳಿ.
- ಸಂಸ್ಥೆಯ ಹಿನ್ನೆಲೆಯ ಜೊತೆಗೆ ಮಕ್ಕಳಿಗೆ ಹೇಳಿಕೊಡುವ ವಿಧಾನ ಹೇಗಿದೆ, ಮಕ್ಕಳ ಕಲಿಕೆಯ ಬಗ್ಗೆ ಎಷ್ಟು ಕಾಳಜಿ ವಹಿಸುತ್ತಾರೆ ಎನ್ನುವ ಬಗ್ಗೆಯೂ ಗಮನ ಹರಿಸಿ.
- ನಿಮ್ಮ ಮಗುವಿನ ಕಲಿಕಾ ಮಟ್ಟಕ್ಕೆ ಅಲ್ಲಿಯ ವಾತಾವರಣ ಹೊಂದುತ್ತದೆಯೇ ಎಂದು ಗಮನಿಸಿಯೇ ತರಗತಿಗೆ ಸೇರಿಸಿ.
- ತರಗತಿಗೆ ಸೇರಿಸಿದ ನಂತರವೂ ಅಲ್ಲಿನ ವಾತಾವರಣಕ್ಕೆ ಮಗು ಹೊಂದಿಕೊಂಡಿದೆಯೇ ಇಲ್ಲವೇ ಎಂಬ ಕುರಿತು ಗಮನಿಸಿ. ಮಗುವಿನ ಜೊತೆಗೇ ತರಗತಿಯ ಕುರಿತು ಮಾತಾಡುವುದು ಹೆಚ್ಚು ಸಹಕಾರಿ.